( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿಃ **30/01/2020**

**ಅಸಲು ದಾವೆ.ನಂ. 172/2015**

ಪಿ.ಡಬ್ಲ್ಯೂ 1

( ಪಾಟೀ ಸವಾಲುಃ ಶ್ರೀ ಆರ್.ಕೆ.ಎಂ. ವಕೀಲರಿಂದ )

ನನ್ನ ಯಜಮಾನರ ಹೆಸರು ಈಶ್ವರೇಗೌಡ. ಈಶ್ವರೇಗೌಡರ ತಂದೆಯ ಹೆಸರು ಬಕ್ಕೆಗೌಡ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ವೀರಭದ್ರೇಗೌಡ ಎಂದು ನುಡಿಯುತ್ತಾರೆ. ನನಗೆ 3 ಜನ ಹೆಣ್ಣುಮಗಳು ಒಬ್ಬ ಮಗ ಎಂದರೆ ಸರಿ. ಅವರುಗಳು ಎಂದರೆ ಮಂಜೇಗೌಡ ಜಯಮ್ಮ ತಿಮ್ಮಾಜಿ ಮತ್ತು ಸುಭದ್ರ. ನಾನು ನನ್ನ ಮಗ ಒಟ್ಟಿಗೆ ವಾಸ ಮಾಡುತ್ತಿದ್ದೇವೆ. ಹೆಣ್ಣುಮಕ್ಕಳು ಮದುವೆಯಾಗಿ ಅವರವರ ಗಂಡಂದಿರ ಮನೆಯಲ್ಲಿ ವಾಸವಾಗಿದ್ದಾರೆ.

ನಮ್ಮ ಕುಟುಂಬದಲ್ಲಿ ಯಾವುದೇ ಹಿಸ್ಸೆಯಾಗಿಲ್ಲ. ಈಶ್ವರೇಗೌಡರಿಗೆ ರಾಜಮ್ಮ ಎಂಬ ತಂಗಿ ಇದ್ದರು ಎಂದರೆ ಸರಿ. ಅವರು ಮದುವೆಯಾಗಿ ಅವರ ಗಂಡನ ಮನೆಯಲ್ಲಿ ಇದ್ದಾರೆ. ನನ್ನ ಮಾವನ ತಂದೆಯ ಹೆಸರು ಗೌಡೇಗೌಡ ಎಂದರೆ ಸರಿ. ಗೌಡೇಗೌಡರಿಗೆ ಇಬ್ಬರು ಜನ ಹೆಣ್ಣುಮಕ್ಕಳು ಇಬ್ಬರು ಗಂಡು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವ ಬಕ್ಕೆಗೌಡರಿಗೆ ಕಾಡೇಗೌಡ ಎಂಬ ಅಣ್ಣನಿದ್ದ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವನವರಿಗೆ ಚೆನ್ನಮ್ಮ ಎಂಬ ತಂಗಿ ಇದ್ದು ಅವರನ್ನು ಮಲ್ಲಿನಾಥಪುರಕ್ಕೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. ಅವರು ಈಗ ಮೃತಪಟ್ಟಿದ್ದು ಅವರಿಗೆ 3 ಜನ ಮಕ್ಕಳು ಎಂದರೆ ಸರಿ. ಅವರುಗಳು ಎಂದರೆ ರಾಧಮ್ಮ ರುಕ್ಮಿಣಿ ಮತ್ತು ನಾಗಮಣಿ ಎಂದರೆ ಸಾಕ್ಷಿಯು ಅವರುಗಳು ಹೆಸರುಗಳು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಗೌಡೇಗೌಡರ ಹಿರಿಯ ಮಗ ಕಾಡೇಗೌಡರಿಗೆ ಜಯಮ್ಮ ಮತ್ತು ಸಣ್ಣಪುಟ್ಟಮ್ಮ ಎಂಬ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಕಾಡೇಗೌಡರ ಮೊದಲನೆ ಮಗಳು ಜಯಮ್ಮನ ಮಗನೇ 1 ನೇ ಪ್ರತಿವಾದಿ ಎಂದರೆ ಸರಿ. ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿ ತಮ್ಮೇಗೌಡ ಎಂದರೆ ಸರಿ. ಆತ ಜಯಮ್ಮನ

ಮಗ ಹೌದೋ ಇಲ್ಲವೋ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ ಜಯಮ್ಮನವರಿಗೆ ಶಾಂತಮ್ಮ ಎಂಬ ಮಗಳು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಣ್ಣಪುಟ್ಟಮ್ಮ ಯಾರು ಮತ್ತು ಅವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು.

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )**

**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**

**ಜೆ.ಎಂ.ಎಫ್.ಸಿ,ಅರಕಲಗೂಡು.**